88

# ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಉಮಾಶ್ರೀ, ರವರು ನಿಯಮ 72ರಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಹೇಳಿಕೆ

## ಸೂಚನೆ

"ಕರ್ನಾಟಕ ಲೋಕಸೇವಾ ಆಯೋಗದಿಂದ ನಡೆಯುವ ಕೆ.ಎ.ಎಸ್ ಪರೀಕ್ಷೆಯನ್ನು ಬರೆಯಲು ವಿಕಲಚೇತನ ಅಭ್ಯರ್ಥಿ, ಮಾಜಿ ಸೈನಿಕರು ಹಾಗೂ ವಿಧವೆ ಅಭ್ಯರ್ಥಿಗಳಿಗೆ ಪರೀಕ್ಷೆ ಬರೆಯಲು 10 ವರ್ಷ ವಯೋಮಿತಿಯನ್ನು ಸಡಿಲಿಕೆ ಮಾಡಿ ಸರ್ಕಾರ ಅವರಿಗೆ ಪರೀಕ್ಷೆ ಬರೆಯಲು ಅನುಕೂಲ ಮಾಡಿಕೊಟ್ಟಿರುತ್ತದೆ.

ಅದರಂತೆ ಮಂಗಳಮುಖಿ ಸಮುದಾಯದವರಿಗೂ ಕೆಪಿಎಸ್‌ಸಿ ವತಿಯಿಂದ ನಡೆಸುವ ಕೆಎಎಸ್ ಪರೀಕ್ಷೆಯನ್ನು ಬರೆಯಲು 10 ವರ್ಷ ವಯೋಮಿತಿಯನ್ನು ಸಡಿಲಿಸಿ ಅವಕಾಶ ಮಾಡಿಕೊಡಬೇಕು. ಕಾರಣ ಈಗಾಗಲೇ ಮಂಗಳಮುಖಿ ಸಮುದಾಯದವರ ಪರವಾಗಿ 2014 ರ ಸರ್ವೋಚ್ಚ ನ್ಯಾಯಾಲಯದಿಂದ ಬಂದಂತಹ ತೀರ್ಪಿನ ನಂತರ ಕೆಲವು ಮಂಗಳಮುಖಿಯರು ತಮ್ಮ 38 ರಿಂದ 40 ರ ವಯಸ್ಸಿನಲ್ಲಿಯು ವಿದ್ಯಾಭ್ಯಾಸ ಹಾಗೂ ಪದವಿಯನ್ನು ಮುಂದುವರಿಸುತ್ತಿದ್ದಾರೆ. ಸದರಿ ಸಮುದಾಯದವರಿಗೆ ವಯೋಮಿತಿ ಸಡಿಲಿಸಿದ್ದಲ್ಲಿ ಇವರುಗಳು ತಮ್ಮ ಉತ್ತಮ ಜೀವನವನ್ನು ರೂಪಿಸಿಕೊಳ್ಳಲು ಅನುಕೂಲವಾಗುತ್ತದೆ ಈ ಹಿನ್ನೆಲೆಯಲ್ಲಿ ಈ ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯಲು ಬಯಸುತ್ತೇನೆ.

## ಹೇಳಿಕೆ

ಗೆಜೆಟೆಡ್ ಪ್ರೊಬೇಷನರ್ಸ್ ನೇಮಕಾತಿ ಪರೀಕ್ಷೆಯನ್ನು ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್ಸ್ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕ) ನಿಯಮಗಳು, 1997 ರನ್ವಯ ಕರ್ನಾಟಕ ಲೋಕಸೇವಾ ಆಯೋಗದಿಂದ ನಡೆಸಲಾಗುತ್ತದೆ. ಸದರಿ ಪರೀಕ್ಷೆಗೆ ವಿಕಲಚೇತನ ಅಭ್ಯರ್ಥಿ ಮತ್ತು ವಿಧವಾ ಅಭ್ಯರ್ಥಿಗಳಿಗೆ 10 ವರ್ಷ ಹಾಗೂ ಮಾಜಿ ಸೈನಿಕ ಅಭ್ಯರ್ಥಿಗಳಿಗೆ ಸೇನೆಯಲ್ಲಿ ಸೇವೆ ಸಲ್ಲಿಸಿದ ವರ್ಷಗಳ ಜೊತೆಗೆ ಹೆಚ್ಚುವರಿಯಾಗಿ ಮೂರು ವರ್ಷಗಳಷ್ಟು ವಯೋಮಿತಿ ಸಡಿಲಿಕೆ ಇರುತ್ತದೆ.

ಮುಂದುವರೆದು, ಮಂಗಳಮುಖಿ ಸಮುದಾಯದವರಿಗೆ 10 ವರ್ಷ ವಯೋಮಿತಿಯನ್ನು ಸಡಿಲಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

(ಸಿದ್ದರಾಮಯ್ಯ)
ಮುಖ್ಯಮಂತ್ರಿ

ಸಂಖ್ಯೆ: ಸಿಆಸುಇ 137 ಎಸ್‌ಎಸ್‌ಸಿ 2023